**ಹೆಚ್ಚುವರಿ ದಿವಾಣಿ ನ್ಯಾಯಾಧೀಶರು ಮತ್ತು ಜೆ.ಎಮ್.ಎಫ್.ಸಿ ನ್ಯಾಯಾಲಯ, ರೋಣ**

ಸಿ.ಸಿ. ನಂ.460/2019

ಸಿ.ಡಬ್ಲೂಃ 1 ಪಿ.ಡಬ್ಲೂಃ 1

ಹೆಸರುಃ ಬಸವ್ವ ಊರ್ಫ ಬಸವೆಣ್ಣವ್ವ

ಗಂಡನ ಹೆಸರುಃ ಮಲ್ಲಪ್ಪ ಬನ್ನಿಗೋಳ

ವಯಸ್ಸುಃ 80 ವರ್ಷ

ಉದ್ಯೋಗಃ ಮನೆಗೆಲಸ

ವಿಳಾಸಃ ಕುರಡಗಿ ತಾಃ ಗದಗ

**ಸಾಕ್ಷಿಯನ್ನು ಸತ್ಯ ಪ್ರತಿಜ್ಞೆಯ ಮೇರೆಗೆ ಇಂದು ದಿನಾಂಕಃ 23/01/2023 ರಂದು ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ- ಆರೋಪಿತರ ಪರ ಶ್ರೀ. ಪಿ ಕೆ ಯು ವಕೀಲರಿಂದಃ**

1. ನನ್ನ ತಂದೆಯ ಹೆಸರು ಸಂಗಪ್ಪ. ನನ್ನ ತಾಯಿಯ ಹೆಸರು ಶಂಭವ್ವ. ನನ್ನ ತಂದೆ ತಾಯಿಗೆ 6 ಜನ ಹೆಣ್ಣು ಮಕ್ಕಳು ಮತ್ತು ಒಬ್ಬ ಗಂಡು ಮಗ ಇರುತ್ತಾರೆ. ನ್ಯಾಯಾಲ ಯದ ಮುಂದೆ ಇರುವ 1 ನೇ ಆರೋಪಿ ಗಂಗಾಧರ, ನನ್ನ ತಮ್ಮ. 6 ಜನ ಹೆಣ್ಣು ಮಕ್ಕಳ ಹೆಸರು 1) ಬಸವ್ವ, 2) ಪಾರವ್ವ, 3) ರತ್ನವ್ವ ,4) ಶಿವಗಂಗವ್ವ, 5) ಅಕ್ಕಮ್ಮ ಮತ್ತು 6) ಸಾವಿತ್ರಿ . ನನ್ನ ತಂದೆ 30 ವರ್ಷಗಳ ಹಿಂದೆ ತೀರಿಕೊಂಡಿದ್ದಾರೆ. ನನ್ನ ತಂದೆಗೆ 40 ಎಕರೆ ಜಮೀನು ಇತ್ತು. ಅವುಗಳ ಸರ್ವೇ ನಂಬರ ನನಗೆ ಗೊತ್ತಿಲ್ಲ, ಆದರೆ ಹೊಲ ಎಲ್ಲಿ ಎಲ್ಲಿ ಇವೆ ಎಂದು ಹೇಳುತ್ತೇನೆ. ನನ್ನ ತಂದೆ ಸತ್ತ ನಂತರ ನಾನು, ಮತ್ತು ಉಳಿದ ಅಕ್ಕ ತಂಗಿಯರು ಸೇರಿದಂತೆ ನಮಗೆ ಆಸ್ತಿಯಲ್ಲಿ ಯಾವುದೇ ಪಾಲು ಬೇಡ, ನೀನೇ ತೆಗೆದುಕೋ ಎಂದು ಆರೋಪಿಗೆ ಒಪ್ಪಿಗೆ ಕೊಟ್ಟಿದ್ದೆ ಎಂದರೆ ಸಾಕ್ಷಿ ಮುಂದುವರೆದು

ಆರೋಪಿಯು ಸಬ್ ರಿಜಿಸ್ಟರ ಆಫೀಸ ಗೆ ಮತ್ತೊಬ್ಬರನ್ನು ಕರೆದುಕೊಂಡು ಹೋಗಿ , ಫೋಟೊ ತೆಗೆಯಿಸಿ, ನನ್ನ ಹೆಸರನ್ನು ತೆಗಿಸಿರುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ. ಬೇರೆ ಅಕ್ಕ ತಂಗಿಯರು ಒಪ್ಪಿಗೆ ಕೊಟ್ಟಿದ್ದಾರೆ ಎಂದರೆ ನಿಜ.

2. ನನಗೆ ಕುರಡುಗಿಗೆ ಮದುವೆ ಮಾಡಿಕೊಟ್ಟಿದ್ದಾರೆ. ನನಗೆ 3 ಜನ ಗಂಡು ಮಕ್ಕಳು, ಇಬ್ಬರು ಹೆಣ್ಣು ಮಕ್ಕಳು. ಇಬ್ಬರ ಹೆಣ್ಣುಮಕ್ಕಳಲ್ಲಿ ಒಬ್ಬಳ ಹೆಸರು ಜಯಶ್ರೀ ಎಂದರೆ ನಿಜ. ನಾನು ಆರೋಪಿಯನ್ನು ನನ್ನ ಮಗಳಾದ ಜಯಶ್ರೀ ಇವಳನ್ನು ಮದುವೆ ಆಗು ಎಂದು ಗಂಟು ಬಿದಿದ್ದೆ ಎಂದರೆ ಸರಿ ಅಲ್ಲ. ಆ ಸಮಯದಲ್ಲಿ ಆರೋಪಿ ನನಗೆ ಜಯಶ್ರೀಯನ್ನು ಮದುವೆ ಆಗಲು ಇಷ್ಟ ಇಲ್ಲ ಎಂದು ಹೇಳಿದ್ದ ಎಂದರೆ ಸರಿ ಅಲ್ಲ. ಆ ರೀತಿ ನಿರಾಕರಿಸಿದ್ದರಿಂದ ನನಗೆ ಆರೋಪಿಯ ಮೇಲೆ ಸಿಟ್ಟು ಇತ್ತು ಎಂದರೆ ಸರಿ ಅಲ್ಲ. ಆ ಸಮಯದಲ್ಲಿ ಆರೋಪಿಯು ಲಗ್ನ ಆಗುತ್ತಿದ್ದಾಗ , ಆ ಲಗ್ನಕ್ಕೆ ನಾನು ತಕರಾರು ಮಾಡಿದ್ದೆ ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರೆದು ನನಗೆ ಆರೋಪಿ ಲಗ್ನಕ್ಕೂ ಕರೆದಿರಲಿಲ್ಲ, ನಾನು ಹೋಗಿರಲಿಲ್ಲ ಎಂದು ಹೇಳುತ್ತಾರೆ. ಆ ರೀತಿ ಸುಳ್ಳು ಹೇಳುತ್ತಿದ್ದೇನೆಂದರೆ ಸರಿ ಅಲ್ಲ.

3. ವೀರಪ್ಪ ಬನ್ನಿಗೋಳ ನನ್ನ ಮಗ ಎಂದರೆ ನಿಜ. ಪ್ರತಿಬಾರಿ ಕೋರ್ಟ ಗೆ ನನ್ನ ಮಗ ವೀರಪ್ಪ ಕರೆದುಕೊಂಡು ಬರುತ್ತಾರೆ ಎಂದರೆ ಸಾಕ್ಷಿ ನನಗೆ ವಯಸ್ಸು ಆಗಿದ್ದರಿಂದ

ಕರೆದುಕೊಂಡು ಬರುತ್ತಾರೆ ಎಂದು ಹೇಳುತ್ತಾರೆ. ನಾನು ಈ ಕೇಸನ್ನು ಮತ್ತು ದೂರನ್ನು ನನ್ನ ಮಗನ ಮಾತು ಕೇಳಿ ಮಾಡಿದ್ದೇನೆ ಎಂದರೆ ಸಾಕ್ಷಿ ನಾನು ಹೇಳಿದ ಪ್ರಕಾರ ದೂರು ಮಾಡಿದ್ದೇನೆ ಎಂದು ಹೇಳುತ್ತಾರೆ.

4. ನಾನು ರೋಣದ ಸಿನಿಯರ ಸಿವಿಲ್ ಜಡ್ಜ ನ್ಯಾಯಾಲಯದಲ್ಲಿ ಅಸಲು ದಾವೆ ನಂ.14/2016 ರಂತೆ ಆರೋಪಿಯ ವಿರುದ್ಧ ಇದೇ ಜಮೀನುಗಳಿಗೆ ಸಂಬಂಧಪಟ್ಟಂತೆ ಘೋಷಣಾತ್ಮಕ ದಾವೆ ಮಾಡಿದ್ದೇನೆ ಎಂದರೆ ನಿಜ. ಆರೋಪಿಯು ಆ ದಾವೆಯಲ್ಲಿ ತನ್ನ ಕೈಪಿಯತ್ತು ಸಲ್ಲಿಸಿದ್ದಾನೆ ಎಂದರೆ ನಿಜ. ಆ ತಕರಾರು/ ಕೈಪಿಯತ್ತಿನಲ್ಲಿ ನಾನು ಮತ್ತು ಉಳಿದ ಅಕ್ಕ ತಂಗಿಯರು ನಮ್ಮ ಹಕ್ಕನ್ನು ಬಿಟ್ಟುಕೊಟ್ಟಿದ್ದೇವೆ ಎಂದು ಆರೋಪಿ ಹೇಳಿದ್ದ ಎಂದರೆ ಸರಿ ಅಲ್ಲ. ಆ ದಾವೆಯನ್ನು ನಾನೇ ನನ್ನ ವಕೀಲರಿಗೆ ಹೇಳಿ ಹಾಕಿಸಿದ್ದೇನೆ ಎಂದರೆ ನಿಜ. ನಾನು ಆ ದಾವೆಯಲ್ಲಿ ಹಾಕಿದ್ದಂತಹ ತಕರಾರನ್ನು ತಿಳಿದುಕೊಂಡಿದ್ದೇನೆ. ಆ ಸಿವಿಲ್ ದಾವೆಯಲ್ಲಿ ನಾನು ದಿಃ 31/05/2017 ರಂದು ಅರ್ಜಿ ಸಲ್ಲಿಸಿ, ನಾನೇ ಆ ದಾವೆಯನ್ನು ವಜಾ ಮಾಡಿಸಿಕೊಂಡಿದ್ದೆ ಎಂದರೆ ಸರಿ ಅಲ್ಲ. ನಾನು ನನ್ನ ಹಕ್ಕನ್ನು ಆರೋಪಿಗೆ ಬಿಟ್ಟುಕೊಟ್ಟಿದ್ದರಿಂದ ನಾನು ಆ ದಾವೆಯನ್ನು ವಜಾ ಮಾಡಿಸಿಕೊಂಡಿದ್ದೆ ಎಂದರೆ ಸರಿ ಅಲ್ಲ. ದಿಃ 27/05/2015 ರಂದು ನಾನು ರೋಣ ಸಬ್ ರಿಜಿಸ್ಟರ ಆಫೀಸ ಗೆ ಬಂದಿದ್ದೆ ಎಂದರೆ ಸರಿ ಅಲ್ಲ. ನಾನು ಅಸಲು ದಾವೆ ನಂ 14/2016 ರಲ್ಲಿ ದಾವೆ

ಮಾಡುವಾಗ ವಕೀಲರಿಗೆ ದಾಖಲೆಗಳನ್ನು ತೆಗೆಸಿ ಕೊಟ್ಟಿದ್ದೆ ಎಂದರೆ ನಿಜ. ದಿಃ 27/05/2015 ರಂದು ನಾನು ರೋಣ ಸಬ್ ರಿಜಿಸ್ಟರ ಆಫೀಸಗೆ ಆರೋಪಿಯ ಹೆಸರಿಗೆ ಹಕ್ಕು ಬಿಟ್ಟು ಕೊಟ್ಟ ಪತ್ರ ಬರೆಸಿದ್ದೆ ಎಂದರೆ ಸರಿ ಅಲ್ಲ. ಆ ಸಮಯದಲ್ಲಿ ನಾನು ನನ್ನ ಸಹೋದರಿ ರತ್ನವ್ವಳನ್ನು ಕರೆದುಕೊಂಡು ಹೋಗಿದ್ದೆ ಎಂದರೆ ಸರಿ ಅಲ್ಲ. ಆ ಸಮಯದಲ್ಲಿ ನಾನು ಸಾಕ್ಷಿದಾರರನ್ನು ಸಹ ಸಬ್ ರಿಜಸ್ಟರ ಕಚೇರಿಗೆ ಕರೆಸಿದ್ದೆ ಎಂದರೆ ಸರಿ ಅಲ್ಲ. ಸಾಕ್ಷಿದಾರರಾದ ಎಸ್ ಬಿ ಮುಧೋಳ ಮತ್ತು ಡಿ. ಜಿ. ಮುಧೋಳ ನನಗೆ ಪರಿಚಯಸ್ಥರು ಎಂದರೆ ಸರಿ ಅಲ್ಲ. ನಾನು ಅವರನ್ನು ಸಾಕ್ಷಿ ಹಾಕಿಸಲು ಕರೆದುಕೊಂಡು ಹೋಗಿದ್ದೆ ಎಂದರೆ ಸರಿ ಅಲ್ಲ. ನಾನು ದಸ್ತು ಬರಹಗಾರರಾದ ಎನ್ ವಿ ಲಿಂಗಶೆಟ್ಟಿ ಇವರ ಮೂಲಕ ಪತ್ರ ಬರೆಯಿಸಿ, ಹಕ್ಕು ಬಿಟ್ಟು ಕೊಟ್ಟ ಪತ್ರವನ್ನು ನಿಪಿಃ 1 ರಂತೆ ಬರೆಸಿದ್ದೆ ಎಂದರೆ ಸರಿ ಅಲ್ಲ. ನಾನು ನಿಪಿಃ 1 ಪತ್ರವನ್ನು ಓದಿ ತಿಳಿದುಕೊಂಡು ನಂತರ ಸಹಿ ಮಾಡಿದ್ದೇನೆಂದರೆ ಸರಿ ಅಲ್ಲ.

**ಮುಂದವರೆದ ಪಾಟೀ ಸವಾಲುಃ- ಕೋರಿಕೆಯ ಮೇರೆಗೆ ಮೂಂದುಾಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಗಿದೆ.)

ಓ.ಹೇ.ಕೇ. ಸರಿ ಅದೆ.

**( ಆದಿತ್ಯ ಆರ್ ಕಲಾಲ್ )**
**ಹೆಚ್ಚುವರಿ ಸಿವಿಲ್ ಹಾಗೂ ಜೆ.ಎಮ್.ಎಫ್.ಸಿ**
**ನ್ಯಾಯಾಧೀಶರು ರೋಣ.**